## ಹರಾಜ್ ನಿಬಂಧನೆಗಳು.

1873ನೇ ಇಸವಿ ಜೂ್ 12ನೇ ಮತ್ತು ಂ 20ನೇ ನಂಬರ್ ಮೈಸೂರು ಗೆಜೆಟ್ ಇಸ್ತಿಹಾರ್ ಪ್ರಕಾರ.

ಶಿಕಾರಿಪುರದಲ್ಲಿರುವ ತಾಲ್ಲೂಕು ಖಜಾನೇಯಲ್ಲಿ ಮೊಬಲಗ್ ಪಾವತೀಮಾಡತಕ್ಕದ್ದು. ಖರೀದಿ ಮೊಬಲಗಿನಲ್ಲಿ ಕೀಕಡ 25 ರೂ ಪಾಯಿ ಪ್ರಕಾರ ಐರ್ಜ ಖಜಾನೇಯಲ್ಲಿ ಪಾವತೀನೂಡಿ ಆಬಗ್ಯೆ ಪಡೆದ ರೀದಿಯನ್ನು ಹರಾಜುನಡಿಸುವ ಆಫಿಸರರಿಗೆ ಹರಾಜು ತಾರೀಖು ಲಾಗಾಯತು ಐದನೇದಿನ ಸಾಯಂಕಾಲಕ್ಕೆ ಪೂರ್ವ ಕೊಡತಕ್ಕದ್ದು.

ಹರಾಜ್ ತಾರೀಖು ಲಾಗಾಯತು 6ನೇ ದಿನ ಹಣ ಪಾವತೀ ಮಾಡುವದಕ್ಕೆ ತಪ್ಪಿದವರ ಮರವನ್ನು ಪುನಃ ಮಾರಲಿಕ್ಕೆ ಪ್ರತಿ ಡಿಪೋಯಲ್ಲಿಯೂ ಯಾರನೇ ಹರಾಜ್ ನಡಿಸಲ್ಪಡುವದು.

G. J. VAN SOMEREN, *Captain,*
*Conservator of Forests, Mysore & Coorg.*

## KOLAR DISTRICT.

ತಾರೀಖು 23ನೇ ಡಿಸಂಬರ್ 1875.

ಇದರಿಂದ ತಿಳಿಯಪಡಿಸುವದೇನಂದರೆ, ಸ್ ೧೮೬೨ರ ಲಾಗಾಯತು 1870ನೇ ಇಸವಿ ವರವಿಗೆ ಈ ಕೋರ್ಟು ಅರಿಜಿನಲ್ ವ ಅಪ್ಪೀಲ ಮೊಕದ್ದಮೆಗಳೊಳಗೂ, ಅಮಲ್ಜಾರೀ ವ ಯಿತರ ಮಿಸಲೀನಿಯಸ್ ಮೊಕದ್ದಮೆಗಳೊಳಗೂ, ನಡವಳಿತಗಳೊಳಗೂ ಕ್ರಿಮಿನಲ್ ಮೊಕದ್ದಮೆಗಳೊಳಗೂ, ಮತ್ತು 1839ನೇ ಯಿಸವಿ ಲಾಗಾಯತು 1862ನೇ ಯಿಸವಿ ವರಿಗಿನ ಟಾಬತು ಮಾಜೀ ಜದೀದ್ ಪ್ರಿನ್ಸಿಪಲ್ ಸದರ್ ಅಮೀನಿಗೆ ವ ಮಾಜೀ ಬೆಂಗಳೂರು ಡಿವೀಜನ್ ಸೂಪರ್ಟೆಂಡೆಂಟ್ ಈ ಕೋರ್ಟುಗಳಿಂದ ಬಂದ, ಕೆಲವು ಸಿವಿಲ್ ಮೊಕದ್ದಮೆಗಳೊಳಗೂ, ಕಕ್ಷಿಗಾರ್ರುಗಳಿಂದ ದಾಖಲ್ಮಾಡಲ್ಪಟ್ಟ ದರೋಬಸ್ತು ದಸ್ತಾವೇಜುಗಳೂ, ಸಾಧನಗಳೂ, ಲೆಕ್ಕಗಳೂ ವ ಯಿತರ ಕಾಗದಗಳೂ, ಹಳೆ ಜುಡಿಷಿಯಲ್ ರಿಕಾರ್ಡ್ಗಳನ್ನು ನಾಶಪಡಿಸತಕ್ಕ ಬಗ್ಯೆ ಯೇರ್ಪಟ್ಟ ರೂಲಸ್ ಅನುಸಾರವಾಗಿ ಸ್ ೧೮೭೬ನೇ ಯಿಸವಿ ಮಾರ್ಚಿ ಗುರ್ರೇತಾರೀಖಿನ ದಿನ ನಾಶಮಾಡಲ್ಪಡುವದು.

2. ಐರ್ಜ ಮೊಕದ್ದಮೆಗಳೊಳಗೂ, ನಡವಳಿತಗಳೊಳಗೂ, ತಮ್ಮಿಂದ ಹಾಜರ್ಮಾಡಲ್ಪಟ್ಟ ಯಾವ ದಸ್ತಾವೇಜುಗಳನ್ನಾಗಲಿ ವಾಪಸು ಪಡಿಯತಕ್ಕ ಖಾಯಿಷ್ ಉಳ್ಳ ಕಕ್ಷಿಗಾರರು ಮೇಲೆ ತಿಳಿಸಲ್ಪಟ್ಟ ತಾರೀಖಿಗೆ ಮುಂಚಿತವಾಗಿ ಈ ಕೋರ್ಟಿಗೆ ಕೋರ್ಟ್ ದಿನಗಳಲ್ಲಿ 11 ಘಂಟೆ ಲಾಗಾಯತು ಸಾಯಂಕಾಲ 4 ಘಂಟೆವರಿಗೆ ಅರ್ಜೀ ಬರದುಕ್ಕೊಳ್ಳತಕ್ಕದ್ದು.

---

## Descriptive roll of an escaped convict from the District Jail.

ಸ್ ೧೮೭೫ನೇ ಇಸವಿ ಡಿಸೆಂಬರ್ 23ನೇ ಮತ್ತು ಂ ಬ್ಯೆಗ್ಯೆ ಸುಮಾರು 11 ಘಂಟೆ ವೇಳೆ ಕೋಲಾರ ಜೈಲ್ ತೋಟದಿಂದ ಪರಾರಿಯಾದ ಕೈದಿ ಬಾಬಿಗನ ಚಹರೇ ಪಟ್ಟಿ.

ಹೆಸರು ಬಾಬಿಗ, ತಂದೆ ಹೆಸರು ಅಡಿಯನ್ನ, ಜಾತಿ ಮತ್ತು ಕಸಬು, ತೆಲಗುಬಣಜಿಗರವ ವ್ಯವಸಾಯ, ವಾಸಸ್ಥಳ ಹರ್ಮೇಜಸ್ಟ್ರೇಟೆಮೆ, ಬಳ್ಳಾರಿ ಡಿಸ್ಟ್ರಿಕ್ಟು, ಹಿಂದುಪುರ ತಾಲ್ಲೂಕು ಮ್ಯಾದೇವರಪಲ್ಲಿ, ಎತ್ತರ ಮತ್ಯಾವದಾದರು ಮುಖ್ಯವಾದ ಗುರುತಾಯಿವುಗಳ ದೇಖಿಲೆ ಚಹರೆ, ಯಣಗೆಂಪು, ತೆಳ್ಳಗಿದ್ದಾನೆ, ಎತ್ತರ 5 ಅಡಿ, 5 ಅಂಗುಲ, ಗುಂಡುಮುಖ, ಸುಮಾರು ವಯಸ್ಸು 30 ವರುಷ, ಕಾಲುಗಳ ಮೇಲೆ ಖಜ್ಜಿಯ ಕಲೆಗಳು, ಸ್ವಲ್ಪ ಬಗ್ಗಿದ್ದಾನೆ, ತಳ್ಳಗೆ ವಿಾನೆ ಬಿಟ್ಟಿದ್ದಾನೆ, ಯಾವ ವಿಧವಾದ ಸಜಾ ಆದದ್ದನ್ನು ವಿಧಿಸಿದ ತಾರೀಖು ಮತ್ತು ಯಾವ ತಕಸೀರಿಗೋಸ್ಕರ, ಕೋಲಾರ ಡಿಸ್ಟ್ರಿಕ್ಟು ಮೇಜಸ್ಟ್ರೇಟರ 1875ನೇ ಇಸವಿ ಕ್ರಿಮಿನಲ್ ನಂಬರ್ 33ನೇ ಮೊಕದ್ದಮೆಯಲ್ಲಿ ಚೋರಿಗಾಗಿ ಇಂಡಿಯನ್ ಪೆನಲ್ಕೋಡ್ 392ನೇ ಸೆಕ್ಷನ್ ಮೇರಿಗೆ, ಮೂರು ವರುಷಗಳ ಕಠಿಣ ಸಜಾ, ತಾರೀಖು 26ನೇ ನವಂಬರ್ 1875, ತಪ್ಪಿಸಿಕೊಂಡ ತಾರೀಖು, 23ನೇ ಡಿಸೆಂಬರ್ 1875. ಪರಾ, ಈ ಕೈದಿಯು ಸದರೀ ಜೈಲ್ ತೋಟದಲ್ಲಿ ಕೆಲಸ ಮಾಡುತ್ತಿರುವಾಗ್ಯೆ ಅವನ ಕುಡುತ ಮತ್ತು ಅವನ ಬಲಗಾಲಿನ ಕಬ್ಬಿಣದ ಬೇಡಿ ಇವುಗಳನ್ನು ಬಿಟ್ಟು ಪರಾರಿಯಾಗಿದ್ದಾನೆ, ಪರಾರಿಯಾಗುವ ವೇಳೆ ಬಿಳೀ ಚಡ್ಡಿ, ಕುಲಾವಿ ಮತ್ತು ಕಂಬಳಿ ಹೊದಿದ್ದನು ಮತ್ತು ವಂದುಕಾಲಿನಲ್ಲಿ ಉಂಗ್ರ, ಸರಪಣೀ ಸಹಾ ಯಿತ್ತು

B. KRISHNAIENGAR,
*Dy. Commr. & Magistrate.*

---

## TUMKUR DISTRICT.

Notice regarding an application of Nanjundappa for a certificate under Act XXVII of 1860.

ತುಮಕೂರು ಡಿ|| ಡಿ|| ಕಮ್ಮಿಷನರ್ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧ ಪಡಿಸುವ ದೇನಂದರೆ,—ತೀರಾ ತಾಲ್ಲೂಕು ಹಾಲೇನಹಳ್ಳೀ ಗ್ರಾಮದ ವಾಸಸ್ಥ ರಾಗಿ ಇದ್ದ ಫೂತೀ ಯಾದ ಚಿಕ್ಕಕಪ್ಪಣ್ಣ ನೆಂಬುವನಿಗೆ ಇತರರಿಂದಾ ಬರಬೇಕಾಗಿರುವ 300 ರೂಪಾಯಿಗಳು, ವಸೂಲು ಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಪ್ರಕಾರ ಸರಟಿಫಿಕೇಟು ಅಪೇಕ್ಷಿಸಿ, ಇವನ ಮಗ ನಂಜುಂಡಪ್ಪ ನೆಂಬುವನು ದಾಖಲ್ ಮಾಡಿ ಯಿರುವ ಅರ್ಜೀಯನ್ನು 1876ನೇ ಇಸವಿ ಫಿಬ್ರವರೀ ತಿಂಗಳು 9ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದ ಯಿದಕ್ಕೆ ತಕರಾರ್ ಮಾಡುವರ್ಯಾರಾದರೂ ಯಿದ್ದರೆ, ಈ ಕೋರ್ಟು ರೂಬರೂ ಸದರೀತಾರೀಖು ದಿವಿ 12 ಘಂಟೆಗೆ ಹಾಜರಾಗ ಬೇಕಾಗಿರುತ್ತೆ.

ತಾರೀಖು 6ನೇ ಮಾಹೆ ಜನವರೀ 1876ನೇ ಇಸವಿ, ಮೊಕ್ಕಾಂ ತುಮಕೂರು.

C. J. Pearse,
*Dy. Commr.*

## MYSORE DISTRICT.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್.

ತಾರೀಖು—ನೇ ಮಾಹೆ ಡಿಸೆಂಬರ್ 1875ನೇ ಯಿಸವಿ.

1875ನೇ ಇಸವಿ ಆಗಸ್ಟು 29ನೇ ತಾರೀಖಿನಲ್ಲಿ ತಲ್ಕಾಡುತಾಲ್ಲೂಕಿಗೆ ಕೀರಿದ ಕೆಂಡನಕೊಪ್ಪಲು ಚಾವುನ ಪೆಂಡತಿ ಕಾವು ಪಸಿಯಂಬವಳನ್ನ ಖೂನಮಾಡಿದ್ದಾಗಿ ಆಪಾದಿಸಲ್ಪಟ್ಟು ಯಿರುವ ಈ ಕೆಳಗೆ ವಿವರಿಸಲ್ಪಟ್ಟು ಯಿರುವ ಗಿರಿಯನೆಂಬುವನ ದಸ್ತಗಿರಿ ವ ಸಾಬೀತಿಗೆ ತಕ್ಕ ವರ್ತಮಾನ ಕೊಡುವವರಿಗೆ 100 ರೂಪಾಯಿಗಳು ಯಿನಾಂ ಕೊಡಲ್ಪಡುವದು.

ವಿವರಣೆ.

ಹೆಸರು ಗಿರಿಯಾ, ತಂದೆ ಹೆಸರು ಮುತ್ತಾ, ಜಾತಿ ಪಸ್ತ, ವಯಸ್ಸು ಸುಮಾರು 28 ವರುಷ, ಪೈನ್ನತ ಆಡಿ 5, ಅಂಗು ಲ 6, ಗುರ್ತುಗಳು, ಕಪ್ಪುವರ್ನ, ಉದ್ದಮುಖ, 1 ಜೊತೆ ಹತ್ತಕಡಕು ಇಟ್ಟುಯಿದ್ದಾನೆ, ಮಿಕ್ಕ ಬಿಟ್ಟುಯಿದ್ದಾನೆ.

Mahomed Alli,
*For District Magistrate.*

## KADUR DISTRICT.

Notice of sale of a coffee jungle in the Koppa Taluk on the 15th February next, the holder having failed to conform to the terms of the patta under which the jungle was granted him.

ಕಡೂರು ಡಿಸ್ಟ್ರಿಕ್ಟು ಕಾಫೀ ಯಿಜಾರ್ಜು ಅಸಿಸ್ಟೆಂಟ್ ಕಮಿಷನರ್ ಕಚ್ಚೇರಿಯಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೊಪ್ಪ ತಾಲ್ಲೂಕು ಮುರವಳ್ಳಿ ಮೊಗಣಿ ಕರಿಕೆಕೊಂಡ ಗ್ರಾಮದ ಕ್ಕರಿಕೆಕೊಂಡದ ಕಾಫಿ ಯಂಬುವದಕ್ಕೆ ತಾಲ್ಲೂಕು ನಂಬರು 96, ನಗರ ಡಿವೀಜ್ ನಂಬರು 85, ಕಮಿಷನರ ಹಜಾರು ನಂಬರು 2596ನೇ ಪಟ್ಟೆಯನ್ನ ಪಡೆದ ಆಗಳಗುಂಡಿ ವೆಂಕಪ್ಪಯ್ಯನೆಂಬುವನು ರೂಲ್ಸ್ ಪ್ರಕಾರ ಗಿಡಗಳನ್ನ ಹಾಕದೆ ತಪ್ಪಿ ಇರುತ್ತಾನಾಗಿ ಪಟ್ಟೆಯ 3ನೇ ಕಲಂ ವೇರಿಗೆ ಡಿಪ್ಯೂಟಿ ಕಮಿಷನರ್ ಸಾಹೆಬರವರ ಮಾಹೆ ಮಜಕೂರು 14ನೇ ಮಕ್ಕಂ

1313ನೇ ನಂಬರು ಡಾಕೆಟ್ ಅನುಸರಿಸಿ ಈ ಕೆಳಗೆ ಕಾಣಿಸಿ ಯಿರುವ ಬ್ರೌಡೆರಿವುಳ್ಳ ಸ್ಥಳವನ್ನು ಸ್ ೧೮೭೬ನೇ ಇಸವಿ ಫಿಬ್ರವರೀ ತಿಂಗಳು 15ನೇ ತಾರೀಖು ದಿವಿ 11 ಘಂಟೆ ಲಾಗಾಯತು 4 ಘಂಟೆ ವರಿಗೆ ಚಿಕ್ಕ ಮಗಳೂರು ಮೊಕ್ಕಾಮಿನಲ್ಲಿ ನಮ್ಮ ಆಫಿಸ್ ರೂಬರೂ ಹರಾಜ್ ಹಾಕಲ್ ಪಡುತ್ತೆ, ಅಪೇಕ್ಷೆವುಳ್ಳವರು ಜಡದರಖಾಸ್ತಿನಿಂದ ಪಡೆಯಬಹುದು.

ಹಾಗೆ ಪಡೆದವರು ಹರಾಜು ಕೈದಾಗುತ್ತಲೇ ಕೀಕಡಾ 25 ರೂಪಾಯಿನಂತೆ ತೇವಣಾತಿ ಇಟ್ಟು ಮಿಕ್ಕ ಮೊಬಲಗನ್ನು ಹರಾಜು ತಾರೀಖು ಲಾಗಾಯತು 15 ದಿವಸದ ವಳಗಾಗಿ ಹಾಜರ್ಮಾಡಿ ಸದರೀ ಸ್ಥಳವನ್ನು ಸುಫರ್ದು ಮಾಡಿಕ್ಕೊಳ್ಳಬೇಕು, ತಪ್ಪಿದರೆ ಪುನಹಾ ಹರಾಜು ಮಾಡಿಸಿ ಕಮ್ಮಿ ಬರುವ ಹಣಕ್ಕೆ ಮೊದಲು ದರಖಾಸ್ತುದಾರನನ್ನು ಜವಾಬುದಾರನನ್ನಾಗಿ ಮಾಡಿ ಅವನ ಜಿಂದಗಿಯಿಂದ ಭರ್ತೀಮಾಡಿಕ್ಕೊಳ್ಳುವದಲ್ಲದೆ ಈ ತೇವಣಾತಿಯನ್ನು ಸರಕಾರಕ್ಕೆ ಕೇರಿಸೋಣಾಗುತ್ತದೆ.

ಕರಿಕೆಕೊಂಡದ ಮೇಲುಗಡೆ ಜಂಗಲೀಯಲ್ಲಿ ವಾಟೆಬಿಚ್ಚಲ್‌ಕಾಡಿನಲ್ಲಿ ಈ ಕಾನಿನ ಚತುರ್ಗಡಿ.

1 ಪೂರ್ವಕ್ಕೆ ದುರ್ಗದ ಗುಡ್ಡದ ಬುಡದಲ್ಲಿರುವ ನೆಲ್ಲೀಮರದ ಯಡಕ್ಕೆ ದಿಮ್ಮೀ.
1 ಪಶ್ಚಿಮಕ್ಕೆ ದನತಿರುಗುವ ದಾರೀ ಮೂವಿನ ಮರದ ಹತ್ತ ದಿಮ್ಮೀ.
1 ದಕ್ಷಿಣಕ್ಕೆ ನೀರಸರಕುಲು, ಮಡ್ಲೀಮರ, ಬಡಚರನ ಸೊಪಿಹತ್ತ ದಿಮ್ಮೀ, ಕವಲುಮರದ ಹತ್ತ ದಿಮ್ಮೀ ಸಹಾ.
1 ಉತ್ತರಕ್ಕೆ ನೀರಸರಕುಲು, ಮಡ್ಲೀಮರ, ಹುಲಿವೇಮರದ ಹತ್ತದಿಮ್ಮೀ.

ಈ ಚತುರ್ಗಡಿ ಮಧ್ಯೆ ಅಳತೆ ಪ್ರಕಾರ ಆಗುವ ಸಲೆಗಜ 195840ಕ್ಕೆ ಯಕರೇ (40) ಗುಂಟೆ (18) ಗಜ (62.)

ಬತಾರೀಖು 29ನೇ ಡಿಕಂಬರು 1875ನೇ ಇಸವಿ, ಚಿಕ್ಕ ಮಗಳೂರು.

MAHOMED SALIHA,
*Officer in charge of Coffee Department.*

---

## COORG.

Notice regarding an application of Kusálappa for a certificate under Act XXVII of 1860.

### ಕೊಡಗು ಸೂಪ್ರಿಟೆಂಡೆಂಟ್ ಕೋರ್ಟಿನಿಂದ.

ಸರ್ವ ಜನರಿಗೂ ತಿಳಿಯಪಡಿಸುವದೇನಂದರೆ, ಮಡಿಕೆರೆ ತಾಲ್ಲೂಕು ಪೈಕೀ ಹುರೂರು ನೂರೊಕ್ಕಲುನಾಡು ಮಕ್ಕಂದೂರು ಗ್ರಾಮದಲ್ಲಿರುವ ಗೌಡಗಳ ಕುಶಾಲಪ್ಪನು ಘಾತೀ ತನ್ನ ತಂದೆ ಓಂಕಾರಪ್ಪಗೆ ಹೊರಗಿನಿಂದ ಬರತಕ್ಕ ಸಾಲ 900 ರೂಪಾಯಿ ವಸೂಲ್ಮಾಡಿಕ್ಕೊಳ್ಳುವದಕ್ಕೆ ಸ್ ೧೮೬೦ನೇ ಇಸವಿ 27ನೇ ಆಕ್ಟ್ ಮೇರೆ ಬಾಧ್ಯತೆ ಸರ್ಟಿಫಿಕೇಟ್ ಕೊಡಿಸಿಕ್ಕೊಡಬೇಕೆಂಬದಾಗಿ ದರಖಾಸ್ತು ಮಾಡಿರುವ ಮೊಕದ್ದಮು ಸ್ ೧೮೭೬ನೇ ಇಸವಿ ಜನವರೀ ತಾರೀಖು 31ನೇ ದಿನ ಮಡಿಕೆರೆಯಲ್ಲಿ ಫಸ್ಟ್ ಅಸಿಸ್ಟೆಂಟ್ ಸೂಪ್ರಿಟೆಂಡೆಂಟ್ ಕೋರ್ಟಿನಲ್ಲಿ ಹಿಯರಿಂಗ್ ಆಗುವದರಿಂದ ಯಿದಕ್ಕೆ ಯಾರಾದರೂ ಬಾಧ್ಯಪಟ್ಟವರು ಯಿದ್ದರೆ ಸದರೀ ತಾರೀಖಿನ ದಿನ ಹಗಲು 11 ಘಂಟೆಗೆ ಸದರೀ ಕೋರ್ಟ್ಮುಂದೆ ಹಾಜರಾಗಿ ವ್ಯವಹರಿಸಬಹುದು.

ತಾರೀಖು 23ನೇ ಡಿಸೆಂಬರ್ ಸ್ ೧೮೭೫ನೇ ಯಿಸವಿ.

---

Notice regarding an application of Subraya for a certificate under Act XXVII of 1860.

ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ, ಕುಯಂಗೇರಿನಾಡು ಅರ್ವತ್ತೊಕ್ಕಲು ಗ್ರಾಮದ ಬ್ರಾಹ್ಮಣ ಸುಬ್ಬರಾಯನು ಘಾತೀಯಾದ ತನ್ನ ಅಂಣ ವೆಂಕಟರಮಣೈಯಗೆ ಹೊರಗಿನಿಂದ ಬರತಕ್ಕ ಸಾಲ 77 ರೂಪಾಯಿ ವಸೂಲ್ಮಾಡಿಕ್ಕೊಳ್ಳುವದಕ್ಕೆ ಸ್ ೧೮೬೦ನೇ ಇಸವಿ 27ನೇ ಆಕ್ಟ್ ಮೇರೆ ಬಾಧ್ಯತೆ ಸರಟಫಿಕೇಟ್ ಕೊಡಿಸಿಕ್ಕೊಡಬೇಕಾಗಿ ದರಖಾಸ್ತು ಮಾಡಿರುವ ಮೊಕದ್ದಮು ಸ್ ೧೮೭೬ನೇ ಇಸವಿ ಜನವರೀ ತಾರೀಖು 31ನೇ ದಿನ ದಿವಿ 11 ಘಂಟೆಗೆ ಮಡಿಕೆರೆಯಲ್ಲಿ ಫಸ್ಟ್ ಅ|| ಸೂಪ್ರಿಟೆಂಡೆಂಟ್ ಕಚ್ಚೇರಿಯಲ್ಲಿ ಹಿಯರಿಂಗ್ ಆಗುವದರಿಂದ ಇದಕ್ಕೆ ಯಾರಾದರೂ ಬಾಧ್ಯಪಟ್ಟವರು ಇದ್ದರೆ ಸದರೀ ತಾರೀಖಿನ ದಿನ ಈ ಕೋರ್ಟು ಮುಂದೆ ಹಾಜರಾಗಿ ವ್ಯವಹರಿಸ ಬಹುದು.

ತಾರೀಖು 31ನೇ ಡಿಸೆಂಬರ್ 1875ನೇ ಇಸವಿ, ಮೊಕ್ಕಾಂ ಮಡಿಕೆರೆ.

H. G. THOMSON,
*Superintendent.*

---

ಸ್ರ ೧೮೭೫ನೇ ಇಸವಿ ಡಿಸೆಂಬರ್-ತಿಂಗಳ ಕಾಲಸ್ಥಿತಿರಿಪೋರ್ಟು.

ಬೆಂಗಳೂರು ಡಿಸ್ಟ್ರಿಕ್ಟು.

ಮಳ್ಳೆ—ಈ ತಿಂಗಳಲ್ಲಿ ಮಳೆಯೇ ಇಲ್ಲ. ಸಾಧಾರಣವಾಗಿ ನೀರಿಗೆ ದುರ್ಭಿಕ್ಷವಾಗಿರುತ್ತದೆ.

ಫಸಲು—ಮಳೆ ಬಾರದೆ ಇದ್ದದ್ದರಿಂದ ಫಸಲಿಗೆ ಬಹಳವಾಗಿ ನಷ್ಟ ವುಂಟಾಯಿತು. ಕೆಲವು ಸ್ಥಳಗಳಲ್ಲಿ ರಾಗಿ, ಭತ್ತ, ಹುರಳಿ, ಅವರೆ, ತೊಗರಿ, ಹರಳು, ಸಾಮೇ, ಹಾರಕ ಮತ್ತು ಗನ್ನಾ ಕಟುವಾಗಿರುತ್ತೆ. ಖನಖಸೆ, ವೈಶಾಖಿ ಭತ್ತ ಮತ್ತು ಕಡ್ಲೀ ಪೇರಾವ್ನಾಗಿರುತ್ತೆ.

ಆರೋಗ್ಯ—ದೊಡ್ಡಬಳ್ಳಾಪುರ ಮತ್ತು ಮಾಗಡೀ ತಾಲ್ಲೂಕುಗಳಲ್ಲಿ ಚಳಿಜ್ವರ ವ್ಯಾಪಿಸಿತ್ತು. ಡಿಸ್ಟ್ರಿಕ್ಟು ಪೈಕೀಕೆಲವು ಭಾಗಗಳಲ್ಲಿ ಖೈ ಜುಲಾಬ್ ವುಪದ್ರವ ಸಹಾ ವುಂಟಾಗಿತ್ತು.

ಜನಸಾವು—ಜನಗಳ ಪೈಕೀ 425 ಮಂದಿ ಸತ್ತರು, ನವಂಬರ್ ತಿಂಗಳಲ್ಲಿ 505 ಮಂದಿ ಸತ್ತರು. ಖೈ ಜುಲಾಬಿನಿಂದ ಲಷ್ಕರ್ ವಿನಾಹಿಸಿ 20 ಮಂದಿ ಸತ್ತರು.

ಜ್ವಾರ್ತವರ್— ಸತ್ತ ಕಾಲ್ನಡೆಯ ವಿವರ.—

| | | | | | |
|---|---|---|---|---|---|
| ಬೆಂಗಳೂರು ಮತ್ತು ದೊಡ್ಡಬಳ್ಳಾಪುರ ತಾಲ್ಲೂಕುಗಳಲ್ಲಿ ಗೋವಾರಿ ರೋಗದಿಂದ ಸತ್ತದ್ದು | .. | .. | .. | .. | 94 |
| ಯಿತರ ರೋಗಗಳಿಂದ | .. | .. | .. | .. | 624 |
| ಅಡವಿ ಮೃಗಗಳಿಂದ ಕೊಲ್ಲಲ್ಪಟ್ಟದ್ದು | .. | .. | .. | .. | 49 |
| | | | ಜುಮ್ಲಾ | .. | 767 |

ಹಿಂದಿನ ತಿಂಗಳಲ್ಲಿ 1,024 ಸತ್ತವು.

ಜಮೀನು—477—0—11, ರೂಪಾಯಿಗಳ ಕಂದಾಯ ಬಾಳುವ ಜಮೀನು ಸಾಗುವಳೀಗೆ ತೆಗದುಕೊಳ್ಳಲ್ಪಟ್ಟತು.

L. RICKETTS,
*Offg. Dy. Commr.*

ತುಮಕೂರು ಡಿಸ್ಟ್ರಿಕ್ಟು.

ಮಳೆ—ಈ ತಿಂಗಳಲ್ಲಿ ಮಳೆ ಬೀಳಲಿಲ್ಲವು.

ಫಸಲು—ಮುಖ್ಯವಾಗಿ ಸೀರ ಮತ್ತು ಚಿಕ್ಕನಾಯಕನಹಳ್ಳೀ ತಾಲ್ಲೂಕುಗಳಲ್ಲಿ ತರೀ ಮತ್ತು ಖುಷ್ಕೀ ಫಸಲುಗಳು ಮಳೆ ಇಲ್ಲದೆ ಸಾಧಾರಣವಾಗಿ ತೊಂದರೇ ಪಡುವದಾಗಿ ರಿಪೋರ್ಟಾಗಿರುತ್ತದೆ. ಈ ತಿಂಗಳಲ್ಲಿ ವೈಶಾಖಿ ಭತ್ತ, ಗೋಧಿ, ಕಡ್ಲೀ, ಜೋಳ, ಪೇರಾವಾದವು; ರಾಗಿ, ಕಾರ್ತೀಕದ ಭತ್ತ, ಹುರಳಿ, ಅವರೆ, ಸಾಮೇ, ನವಣೆ, ಕಟುವಾದವು.

ಆರೋಗ್ಯ—ಜನಾರೋಗ್ಯ ಸಾಧಾರಣವಾಗಿ ಚೆನ್ನಾಗಿರುತ್ತದೆ. ಕಡಬ ತಾಲ್ಲೂಕಿನಲ್ಲಿ ಖೈ ಜುಲಾಬಿನಿಂದ ಒಬ್ಬನು ಸತ್ತನು. ಎಲ್ಲಾ ಕಾರಣಗಳಿಂದಲೂ 312 ಮಂದಿ ಸತ್ತರು, ನವಂಬರ್ ತಿಂಗಳಲ್ಲಿ 374 ಮಂದಿ ಸತ್ತರು.

ಜ್ವಾರ್ತವರ್—ತುಮಕೂರು ಮತ್ತು ಕುಣಿಗಲು ತಾಲ್ಲೂಕುಗಳಲ್ಲಿ ಗೋವಾರಿ ರೋಗ ಬಹಳವಾಗಿ ವ್ಯಾಪಿಸಿತ್ತು. 665 ಕಾಲ್ನಡೆ ಸತ್ತವು, ನವಂಬರ್ ತಿಂಗಳಲ್ಲಿ 606 ಕಾಲ್ನಡೆ ಸತ್ತವು.

V. KRISHNASWAMAI,
*For Dy. Commr.*

ಕೊಡಗು ಡಿಸ್ಟ್ರಿಕ್ಟು.

ತರೀ ಜಮ್ರ್ಮಾ—ತರೀ ಫಸಲು ಕೂಯ್ಯೆಲ್ ಪಡುತ್ತಾ ಇದೆ.

ಖುಷ್ಕೀ ಜಮ್ರ್ಮಾ—ಅವರೆ ಗಿಡ ಕಾಯಿಯನ್ನು ಬಿಡುತ್ತಾ ಇದೆ.

ಬೂಂದ್—ಇನ್ನು ಕೀಳುತ್ತಾ ಇದ್ದಾರೆ. ಕಾಫೀ ಫಲ ಚೆನ್ನಾಗಿ ಆಗಬಹುದೆಂದು ತೋರುತ್ತೆ.

ಜನಸಾವು—ಜನಗಳ ಪೈಕೀ ಈ ಕೆಳಗೆ ವಿವರಿಸಿರುವ ಪ್ರಕಾರ 187 ಮಂದಿ ಸತ್ತರು, ಕಳೆದ ಇಸವಿ ಇದೇ ತಿಂಗಳಲ್ಲಿ 259 ಮಂದಿ ಸತ್ತರು.

| | | | | | |
|---|---|---|---|---|---|
| ಜ್ವರದಿಂದ | .. | 157 | ಮಡಿಕೆರೆ ತಾಲ್ಲೂಕು | .. | 32 |
| ಆತ್ಮಹತ್ಯದಿಂದ | .. | 0 | ಪಡಿನಾಲ್ಕುನಾಡು | .. | 23 |
| ಅತಿಸಾರದಿಂದ | .. | 8 | ಯಡೆನಾಲ್ಕುನಾಡು | .. | 22 |
| ಆಕಸ್ಮಾತ್ತಿನಿಂದ | .. | 1 | ಕಿಗ್ಗಟ್ಟುನಾಡು | .. | 32 |
| ಇತರ ರೋಗಗಳಿಂದ | .. | 21 | ನಂಜರಾಜಪಟ್ಣ | .. | 26 |
| | | | ಏಳುಸಾವಿರ ಕೇಮೆ | .. | 34 |
| | | | ಪಟ್ಟಣಗಳು | | |
| | | | ಮಹದೇವಪೇಟೆ | .. | 11 |
| | ಕುಲ್ | 187 | ವೀರರಾಜೇಂದ್ರಪೇಟೆ | .. | 6 |
| | | | | ಕುಲ್ | 187 |

ಈ ಪೈಕೀ 87 ಗಂಡಸರು, 64 ಹೆಂಗಸರು ಮತ್ತು 36 ಮಕ್ಕಳು; ಇವರುಗಳ ಜಾತಿಗಳ್ಯಾವವೆಂದರೆ, ಕ್ರಿಸ್ತರು 3, ಕೂಡಗರು 35, ಹಿಂದೂಗಳು 138, ಮಹಮ್ಮದೀಯರು 11, ಇತರರು 10, ಜುಮ್ಲಾ 187.

ಕಾಲ್ನಡೆ-ಜರ್ಜುವರ್ ಪೈಕೀ ಈ ಕೆಳಗೆ ವಿವರಿಸಿರುವ ಪ್ರಕಾರ 347 ಸತ್ತವು, ಕಳೆದ ಇಸವಿ ಇದೇ ತಿಂಗಳಲ್ಲಿ 936 ಸತ್ತವು.
ಹೋರಿಗಳು 81, ಆಕಳುಗಳು 87, ಕರುಗಳು 96, ಕೋಣಗಳು 18, ಯೆಮ್ಮೆಗಳು 30, ಕರುಗಳು 35, ಜುಮ್ಲಾ 347.
ನಿರಖು-ಧಾರಣವಾಸಿ ಯಥಾ ಪ್ರಕಾರ ವಿರುತ್ತೆ.

ಮಳ್ಳೆ—ಮಡಿಕೆರೆಯಲ್ಲಿ.

| | ಇಂಚ್ಸ್. | ಸೆಂಟ್ಸ್. |
|---|---|---|
| ಸ॥ 1875ನೇ ಇಸವಿ ಡಿಸಂಬರ್ ತಿಂಗಳಲ್ಲಿ. .. .. .. | 0 | 0 |
| ಯೀಕೋನು ಮಳೆ ಬಿದ್ದದ್ದು. .. .. .. | 93 | 80 |

A. G. D. LOGAN,
*For Superintendent.*

MYSORE GOVERNMENT PRESS, BANGALORE—1876.